# ನಮಗೆಷ್ಟು ಯಂತ್ರಬೇಕು-ಹಿಂದ್ ಸ್ವರಾಜ್ ಹಿನ್ನೆಲೆಯಲ್ಲಿ

- ಮಧುಸೂಧನ ಜಿ. ಎಚ್
ಸಂಶೋಧನಾ ವಿದ್ಯಾರ್ಥಿ
ಬೆಂಗಳೂರು ವಿಶ್ವವಿದ್ಯಾಲಯ
ಕನ್ನಡ ಸ್ನಾತಕೋತ್ತರ ಮತ್ತು ಸಂಶೋಧನಾ ಕೇಂದ್ರ,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ
ಬೆಂಗಳೂರು- ೫೬೦೧೦೪
ಮೊ. ೬೩೬೧೭೩೦೪೩೫

ಮಾನವರ ನಾಗರೀಕತೆ ಬೆಳೆದಂತೆ ಅವನ ಚಟುವಟಿಕೆಗಳಿಗೆ ಅಗತ್ಯವಾದ ಉಪಕರಣಗಳನ್ನು ಆವಿಷ್ಕಾರಗಳು ವಿಸ್ತರಿಸತೊಡಗಿದಲ್ಲದೆ, ಅವುಗಳ ಮೇಲೆ ಅತಿಯಾದ ಅವಲಂಬನೆಗೆ ಒಳಗಾಗಿರುವುದು ಮನುಕುಲದ ಸಹಜವಾದ ವಿದ್ಯಮಾನವಾಗಿದೆ,

ಶಿಲಾ ಯುಗದಲ್ಲಿ ಬೇಟೆಗಾಗಿ  ಆಕಸ್ಮಿಕವಾಗಿ ಆವಿಷ್ಕರಿಸಿದ ಚೂಪಾದ ಕಲ್ಲಿನ ಭರ್ಜಿಯನ್ನು ನಾವು ಇಲ್ಲಿ ಸ್ಮರಿಸಬಹುದು, ಅದರ ಸಹಾಯದಿಂದ ಪ್ರಾಣಿಗಳನ್ನು ಬೇಟೆಯಾಡಿ ಜೀವನ ಸಾಗಿಸುತ್ತಿದ್ದ ಮನುಜರು, ಮುಂದುವರಿದು "ಚಕ್ರ" (wheel) ನ ಆವಿಷ್ಕಾರದಿಂದ  ಮಹಾ ಯಂತ್ರಗಳ ಮುನ್ನುಡಿಗೆ ನಾಂದಿ ಹಾಡಿದ್ದು ವಿಜ್ಞಾನದ ಇತಿಹಾಸದಲ್ಲಿ ದಾಖಲಾಗಿದೆ, ಈ ಚಕ್ರದಿಂದ ಹಲವು ಉಪಕರಣಗಳನ್ನು ಸೃಷ್ಟಿಸಿರುವ ಮಾನವನ ಬುದ್ಧಿ ಶಕ್ತಿಯು ಅಗಾಧವಾದದ್ದು, ಇದರ ಮುಂದಿನ ಅವೃತ್ತಿಯಾಗಿ ಕೃಷಿ ಚಟುವಟಿಕೆಗಳಿಗೆ ಅಗತ್ಯವಾದ ಸಲಕರಣೆಗಳನ್ನು ಸೃಷ್ಟಿಸಿಕೊಳ್ಳುತ್ತ, ತರುಗಳಿಂದ ಮಾಡಿದ ನೇಗಿಲಿನಿಂದ ಹಿಡಿದು ಇಂದಿನ ಅತ್ಯಾಧುನಿಕ ಸ್ವಯಂಚಾಲಿತ ಕೃಷಿ ಉಪಕರಣಗಳವರೆಗೆ ಮನುಷ್ಯ ತನ್ನ ಅಗತ್ಯತೆಗೆ ತಕ್ಕಂತೆ ಒಂದು ದೊಡ್ಡ ಯಾಂತ್ರಿಕ ಜಗತ್ತನ್ನೇ ಸೃಷ್ಟಿಸಿಕೊಂಡ. ಜನರು ಇನ್ನೂ ಮುಂದುವರಿದು ತನ್ನ ಜೀವನ ಶೈಲಿಯನ್ನು ಸಂಪೂರ್ಣವಾಗಿ ಯಂತ್ರಮಯವಾಗಿಸಿದರು ಎಂದು ಹೇಳಬಹುದು, ಇಲ್ಲಿಂದ  ತನ್ನ ಪ್ರತಿಯೊಂದು ಚಟುವಟಿಕೆಗಳಿಗೂ ಯಂತ್ರಗಳನ್ನು ಅವಲಂಬಿಸಿದ ಅದಕ್ಕಾಗಿ ದೊಡ್ಡ ದೊಡ್ಡ ಕೈಗಾರಿಕೆಗಳನ್ನು ತನ್ನ  ಲಾಭಕೋರತನಕ್ಕಾಗಿ ಪರಿಸರವನ್ನು ಲೆಕ್ಕಿಸದೆ ಸೃಷ್ಟಿಸಿಕೊಂಡ, ತನ್ನ ಅಗತ್ಯತೆಗೆ ಬೇಕಾದ ಯಂತ್ರಗಳ ಉತ್ಪಾದನೆಯನ್ನು ಹೆಚ್ಚಿಸುತ್ತಲೇ ಇದ್ದಾನೆ, ಅದಕ್ಕಾಗಿ ತನ್ನ ಬುದ್ಧಿ ಸಾಮರ್ಥ್ಯವನ್ನೆಲ್ಲ ಬಳಸಿ ಸಂಶೋಧನೆ ಮಾಡಿ, " ಜನಸಂಖ್ಯೆಯನ್ನು ಮೀರಿಸಿದ ಯಂತ್ರ ಸಂಖ್ಯೆ ಸ್ಫೋಟವನ್ನು ಸೃಷ್ಟಿಸುತ್ತಿದ್ದಾನೆ" ಇಂದು ನಾವು ಮನುಷ್ಯ ಮತ್ತು ಯಂತ್ರಗಳ ಸಂಬಂಧವನ್ನು ಗಮನಿಸಿದಾಗ, ಅತಿ ಬುದ್ಧಿವಂತ ಜೀವಿಯಾದ ಮನುಷ್ಯ ತನ್ನ ಸಾಮರ್ಥ್ಯದಿಂದಲೆ ಸೃಷ್ಟಿಸಿದ ಯಂತ್ರಗಳ ಕೈಗೆ ತನ್ನ ಸರ್ವಸ್ವವನ್ನೂ ಕೊಟ್ಟು ಅದರ ಅಧಿಪತ್ಯದಿಂದಾಗಿ ಯಂತ್ರದ ದಾಸನಾಗಿದ್ದಾನೆ, ಅತಿಯಾಗಿ ಯಂತ್ರಗಳ ಅವಲಂಬನೆ ಮಾಡಿದ ಪರಿಣಾಮ ಯಂತ್ರ   ಅಧಿಪತ್ಯ. ಇವುಗಳ "ಬಾಹುಳ್ಯದಿಂದ" (ಪರಿಸರ ಅರ್ಥಶಾಸ್ತ್ರಜ್ಞರಾದ) ಗಾಂಧೀಜಿಯಂಥವರು ಕೂಡ ಗಾಬರಿಯಾಗುತ್ತಾರೆ ಎಂದರೆ

ಇದರ ಪರಿಣಾಮವನ್ನು ಅವರ ದೂರದೃಷ್ಟಿಯನ್ನು ನಾವು ಗಮನಿಸಬೇಕಾಗುತ್ತದೆ, ಯಂತ್ರ ಅಧಿಪತ್ಯಕ್ಕೆ ಸಂಬಂಧಿಸಿದಂತೆ ಅವರು ನೀಡುವ ಕಾರಣಗಳು ಇಂತಿವೆ:

- ಸೃಜನಶೀಲತೆಯ ನಾಶ
- ಕೊಳ್ಳುಬಾಕತನ
- ಶ್ರಮದಿಂದ ದೂರ
- ಪರಿಸರ ನಾಶ
- ಕೃಷಿಯಲ್ಲಿಯಂತ್ರ

ಪ್ರಸ್ತುತ ಗ್ರಾಮೀಣ ಭಾಗದಲ್ಲಿ ಕಂಡುಬರುವ ಕೃಷಿ ಚಟುವಟಿಕೆಗಳು ಯಂತ್ರಗಳನ್ನು ಅವಲಂಬಿಸಿವೆ,ಮುಖ್ಯವಾಗಿ ಸುಲಭ ಮಾತ್ರವಲ್ಲದೇ ಆರ್ಥಿಕವಾಗಿ ಅವರಿಗೆ ತಗ್ಗುವ ವೆಚ್ಚವನ್ನು ಉಳಿಸಲು ಯಂತ್ರಗಳನ್ನು ಬಳಸುತ್ತಾರೆ, ಹಳ್ಳಿಗಳಲ್ಲಿ ಕೂಲಿಕಾರರ ದಿನದ ಕೂಲಿಯ ವೆಚ್ಚ ದುಬಾರಿಯಾಗಿವೆ, ಹಾಗೂ ಕೃಷಿ ಉತ್ಪನ್ನಗಳಿಗೆ ಮಾರುಕಟ್ಟೆಯಲ್ಲಿ ಸೂಕ್ತ ಬೆಲೆ ದೊರೆಯುತ್ತಿಲ್ಲ, ಈ ಸಂಕಟದಿAದ ಪಾರಾಗಲು ರೈತಾಪಿ ವರ್ಗವು ಯಂತ್ರಗಳನ್ನು ಅವಲಂಬಿಸುವುದು ಅನಿವಾರ್ಯವಾಗಿದೆ, ಈ ಸಂಗತಿ ಗಾಂಧೀಜಿಯವರ ಗ್ರಾಮ ಸ್ವರಾಜ್ಯದ ಕಲ್ಪನೆಗೆ ಹಿನ್ನಡೆಯಾದರೂ ಕೂಡ, ಸಮಕಾಲೀನ ಕೃಷಿ ಜಗತ್ತಿನಲ್ಲಿ ಇದು ಅನಿವಾರ್ಯ ಎಂಬ ಸಂಗತಿಯನ್ನು ಕೃಷಿ ಬದುಕನ್ನು ಹತ್ತಿರದಿಂದ ಕಂಡವರಿಗೆ ಮತ್ತು ಕೃಷಿಕರ ಬವಣೆಯನ್ನು ಉಂಡವರಿಗೆ ಇದು ವಾಸ್ತವವಾದ ಸಂಗತಿ ಎಂಬುದು ಅರಿವಿಗೆ ಬರುತ್ತದೆ.

ಗಾಂಧೀಜಿಯವರು ತಮ್ಮ "ಹಿಂದ್ ಸ್ವರಾಜ್"ನಲ್ಲಿ ಯಂತ್ರಗಳನ್ನು  ಪೂರ್ಣವಾಗಿ ತಿರಸ್ಕರಿಸುತ್ತಾರೆ,

ಹತ್ತು ಜನರ ಕೆಲಸವನ್ನು ಒಂದು ಯಂತ್ರ ಮಾಡುವುದನ್ನು ಅವರು ವಿರೋಧಿಸುತ್ತಾರೆ, ಈ ವಿಚಾರವನ್ನು ತಮ್ಮ ಪುಸ್ತಕದಲ್ಲಿ ದಾಖಲಿಸುತ್ತಾರೆ, ಅಷ್ಟಲ್ಲದೆ ಈ ೨೧ನೇ ಶತಮಾನದಲ್ಲಿ ಬಹು ಚರ್ಚಿತವಾಗಿ ವೈಚಾರಿಕತೆಯ ಬಿರುಗಾಳಿಯನ್ನು ಎಬ್ಬಿಸುವ ಮೂಲಕ ಬಹುಮುಖ್ಯವಾಗಿ, ಸಮಾಜದಲ್ಲಿನ ಮೇಲ್ಪಂಕ್ತಿಯ ಹಲವರು ಸೃಷ್ಟಿಸಿರುವ, ಈ ಯಂತ್ರದ ಅವಾಂತರಗಳನ್ನು ತಿರಸ್ಕರಿಸುತ್ತ, ತಮ್ಮ ಗ್ರಾಮ ಸ್ವರಾಜ್ಯದ ನಂಬುಗೆಯ ವಿಕೇಂದ್ರೀಕೃತವಾದ ಪಂಚಾಯತಿ ರಾಜ್ಯ ವ್ಯವಸ್ಥೆಯನ್ನು ಮುನ್ನಾಲೆಗೆ ತರುವ ಪ್ರಯತ್ನ ಮಾಡುತ್ತಾರೆ.

ಗಾಂಧೀಜಿ ಮತ್ತು ಯಂತ್ರ-ಪರಿಸರ

ಗಾಂಧೀಜಿಯವರು ಯಂತ್ರಗಳನ್ನು ಮತ್ತು ಯಂತ್ರನಾಗರೀಕತೆಯನ್ನು ವಿರೋಧಿಸುವಾಗ ನಮ್ಮ ಪರಿಸರ ಅಷ್ಟೆಲ್ಲ ಹಾಳಾಗಿರಲಿಲ್ಲ, ಉದಾ: ವಾಹನಗಳ ಮಾಲಿನ್ಯ ಮತ್ತು ದಟ್ಟಣೆ, ಕಾರ್ಖಾನೆಯ ಮಾಲಿನ್ಯ ಮತ್ತು ಅವು ಹೊರಹಾಕುವ ವಿಷಕಾರಿ ತ್ಯಾಜ್ಯಗಳು, ಈ ಭೂಮಿ ಬಿಸಿಯಾಗುವಿಕೆಯ ಕಲ್ಪನೆಯಾಗಲಿ (Global warming), ಕೊಳಚೆಗಳಿಂದ ಕೂಡಿದ ವಾಸ್ತವ್ಯವನ್ನು ನೋಡಿರದ ಗಾಂಧೀಜಿಯವರು ಅ ಕಾಲದಲ್ಲೆ ಯಂತ್ರನಾಗರಿಕತೆಯನ್ನು ತಿರಸ್ಕರಿಸುವುದು ಸೋಜಿಗದ ಸಂಗತಿಯೇ ಸರಿ. ಈ ಅಸಾಮಾನ್ಯ ಕಲ್ಪನೆಯನ್ನು ಕಂಡು ಇಂದಿನ ದುಸ್ಥಿತಿಗೆ ನಾವು ನೀವು ಸಾಕ್ಷಿಯಾಗಿರುವುದೆ ಸಾಕಲ್ಲವೆ.

ಹಿಂದ್ ಸ್ವರಾಜ್ ಕೃತಿಯ ಮೇಲೆ ಬ್ರಿಟಿಷರು ನಿಷೇಧ ಹೇರಿದರು, ಮತ್ತು ಹಲವರ ವಿರೋಧಕ್ಕೆ ಅದು ಒಳಗಾಗಿತ್ತು, ಈ ಹಂತದಲ್ಲಿ ಗಾಂಧೀಜಿಯವರು ಹಲವು ಟೀಕೆಗೆ ಗುರಿಯಾದರು . ಒಮ್ಮೆ ಸಮಾಜವಾದಿಗಳು ನೀವು ಯಂತ್ರ ವಿರೋಧಿಯೇ ಎಂಬ ಪ್ರಶ್ನೆಗೆ ಹೀಗೆ ಉತ್ತರಿಸುತ್ತಾರೆ, ಈ ದೇಹವೇ ಒಂದು ಯಂತ್ರವಲ್ಲವೆ, ನಾನು ಯಂತ್ರಗಳನ್ನು ತಿರಸ್ಕರಿಸಲು ಹೇಗೆ ಸಾಧ್ಯ, ಈ ದೇಹವೇ ಏಕೆ ? ನಾನು ಬಳಸುವ "ಚರಕ"ವು ಯಂತ್ರವೇ, ಹಲ್ಲಿನ ಕಸ ತೆಗೆಯಲು ಬಳಸುವ ಕಡ್ಡಿಯು ಒಂದು ಯಂತ್ರವೇ ಅಲ್ಲವೇ , "ನನ್ನ ವಿರೋಧವಿರುವುದು ಯಂತ್ರಗಳ ಬಗ್ಗೆಯಲ್ಲ ಈ ಮಾನವರ ಅತಿಯಾದ ಮೋಹದ ಬಗ್ಗೆ ನನ್ನ ವಿರೋಧ ಎನ್ನುತ್ತಾರೆ". ಇದ್ದಲ್ಲದೆ ಸಿಂಗರ್ ತನ್ನ ಪತ್ನಿಯ ಕಷ್ಟವನ್ನು ನೋಡಲಾಗದೆ ತಯಾರಿಸಿದ ಹೊಲಿಗೆ ಯಂತ್ರದ ಬಗ್ಗೆ ಗಾಂಧೀಜಿಯವರಿಗೆ ತಿರಸ್ಕಾರವಿಲ್ಲ, " ಸಿಂಗರ್" ಹೊಲಿಗೆ ಯಂತ್ರವನ್ನು ಕುರಿತು ಸ್ತ್ರೀಯರ ದೈನಂದಿನ ಜಂಜಾಟಗಳನ್ನು ಕಡಿಮೆ ಮಾಡುತ್ತದೆ ಹೊಲಿಗೆ ಯಂತ್ರ ಎಂದು ಹೇಳುತ್ತಾರೆ, ಈ ಹೊಲಿಗೆ ಯಂತ್ರ ತಯಾರಿಸಲು ಬೃಹತ್ ಕೈಗಾರಿಕೆಯೊಂದು ಬೇಕು ತಾನೆ ? ಎಂದು ಪ್ರಶ್ನೆಯನ್ನು ಗಾಂಧೀಜಿಯವರಿಗೆ ಹಾಕಿದರೆ ಸಿಕ್ಕಿಹಾಕಿಕೊಳ್ಳುವುದಿಲ್ಲ, ನಗುತ್ತ ಹೀಗೆ ಹೇಳುತ್ತಾರೆ, ನಿಜ! ಆದರೆ ಅಷ್ಟರ ಮಟ್ಟಿಗೆ ನಾನು ಸಹಿತ ಸಮಾಜವಾದಿಯೇ. ಅಂತಹ ಯಂತ್ರ ಸ್ಥಾವರಗಳು ಸಾರ್ವಜನಿಕ ಆಸ್ತಿಯಾನ್ನಾಗಿಸಬೇಕು ಎಂದು ಹೇಳುತ್ತಾರೆ,

ಈ ಮಾತು ಸತ್ಯವಾಗುವುದು ಸಮಾಜವಾದಿಗಳ ದೃಷ್ಟಿಕೋನದಿಂದ. ಆದರೆ ಇಂದು ಯಂತ್ರನಾಗರೀಕತೆಯ ಪ್ರಭಾವದಿಂದಾಗಿ ಅಗ್ಗವಾಗಿ ಬಡವರಿಗೂ ಮೊಬೈಲ್ ನಂತಹ ಸಾಧನ ಸುಲಭವಾಗಿ ತಲುಪಲು ಸಾಧ್ಯವಾಗಿದೆ, ಇಂತಹ ವಿಚಾರವನ್ನು ಕಂಡಿದ್ದರೆ ಗಾಂಧೀಜಿಯವರು ಕೂಡ ತಲೆದೂರುತ್ತಿದ್ದರು ಎಂಬುದ್ದನ್ನು ಒಪ್ಪಬೇಕಾದ ಸಂಗತಿಯೇ. ಏಕೆಂದರೆ ಗಾಂಧೀಜಿ ಅ ಮಟ್ಟಿಗೆ ಸಮಾಜವಾದಿಗಳಾಗಿದ್ದರು ಎಂಬುದು ಸತ್ಯವೇ ಸರಿ.

**ಯಂತ್ರ ಮತ್ತು ಆಹಾರ**

ಪರಿಸರ- ಸಮಾಜ- ಜೀವಸಂಕುಲಕ್ಕೆ ಅಪಾಯಕಾರಿಯಾಗದ ಯಂತ್ರಗಳನ್ನು ನಾವು ಸ್ವೀಕರಿಸಬಹುದು, ಇಲ್ಲವಾದರೆ ಅದು ಈ ಎಲ್ಲಾ ಸ್ತರಗಳ ಮೇಲೆ ಆಗುವ ಪರಿಣಾಮವನ್ನು ನಾವು ಎದುರಿಸಬೇಕಾಗುತ್ತದೆ,

ಅತಿಯಾದ ಜನಸಂಖ್ಯೆಗೆ ಕಾರಣವಾಗಿರುವುದು ನಮ್ಮ ಜೀವಿತ ಅವಧಿಯನ್ನು ಮುಂದೂಡಲು ಆಗಿರುವ ವೈದ್ಯಕೀಯ ಬದಲಾವಣೆಗಳೆ ಕಾರಣ, ಅತ್ಯಾಧುನಿಕ ಯಂತ್ರಗಳ ಸಹಾಯದಿಂದ ಆಧುನಿಕ ಶಸ್ತ್ರಚಿಕಿತ್ಸೆ, ಅಂಗಾಂಗಗಳ ದೋಷವನ್ನು ಕಂಡುಹಿಡಿಯುವ ಯಂತ್ರಗಳು, ನೋವಿಲ್ಲದ ಚಿಕಿತ್ಸೆಗಳು , ರಕ್ತಗಳನ್ನು ಹೀರಿ ಬೇರ್ಪಡಿಸುವ ಯಂತ್ರಗಳು, ಹೀಗೆ ಹಲವು ಬಗೆಯ ಯಂತ್ರಗಳು ಜೀವಿತಾವಧಿಯನ್ನು ಮುಂದೂಡಲು ಕಾರಣವಾಗಿದೆ. ಆದರೆ ಆರೋಗ್ಯವನ್ನು ಸುಸ್ಥಿತಿಯಲ್ಲಿಡುವುದು ಯಂತ್ರಗಳಲ್ಲ, ನಮ್ಮ ಹಿಂದಿನ ಶ್ರಮ ಸಂಸ್ಕೃತಿ ಎಂಬುದ್ದನ್ನು ನಾವು ಮರೆತಿರುವುದು ಹಾಗೂ ಕಾಯಕವೇ ಕೈಲಾಸವೆಂಬ ತತ್ವವನ್ನು ಕೂಡ ಮರೆತಿರುವುದನ್ನು ಗಮನಿಸಿದಾಗ

ನಮ್ಮ ಆರೋಗ್ಯವನ್ನು ಕಾಪಾಡುವ ಗುಟ್ಟು ದೈಹಿಕ ಶ್ರಮದಿಂದ ಮಾತ್ರ ಸಾಧ್ಯವೇ ವಿನ: ಯಂತ್ರಗಳಿಂದ ನಾವು ಆರೋಗ್ಯವಾಗಿರಲೂ ಸಾಧ್ಯವಿಲ್ಲ ಎಂಬುದು ಅರಿವಾಗುತ್ತದೆ. ಆಹಾರ ಕ್ರಮದಲ್ಲಿಯೂ ಯಂತ್ರಗಳಿಂದ ಅನೇಕ ಬದಲಾವಣೆಗಳಾಗಿವೆ. ಹಿಟ್ಟಿನ ಗಿರಣಿಗಳಿಂದ, ಹಿತಮಿತ ಆಹಾರಗಳಿಂದ ಅತಿಯಾದ ಯಾಂತ್ರಿಕವಾದ ಕೃಷಿ ಪದ್ಧತಿಗಳಿಂದ ಆಹಾರ ತನ್ನ ಸತ್ವವನ್ನು ಕಳೆದುಕೊಂಡು , ವಿಷಪೂರಿತ ಆಹಾರಗಳ ಸೇವನೆಯಿಂದ ಕೂಡ ದೇಹ

ಕ್ಷೀಣಿಸುತ್ತದೆ, ನಮ್ಮ ಪೂರ್ವಜರು ಮತ್ತು ಹಿಂದಿನ ತಲೆಮಾರಿನ ಜನರು ಉಪಯೋಗಿಸುತ್ತಿದ್ದ ಬೀಸು ಕಲ್ಲುಗಳನ್ನು ನಾವು ಮರೆತಿದ್ದೇವೆ, ದೈನಂದಿನ ಆಹಾರಕ್ಕಾಗಿ ಹಿಟ್ಟನ್ನು ಬೀಸುವ ಜೊತೆಗೆ, ದೇಹಕ್ಕೆ ವ್ಯಾಯಮವನ್ನು ನೀಡುವ ಮೂಲಕ ಸದೃಢರನ್ನಾಗಿಸುತ್ತಿದ್ದವು. ಹಿಟ್ಟು ಎಷ್ಟು ಬೇಕೊ ಅಷ್ಟು ಹಿಟ್ಟನ್ನು ಬೀಸುತ್ತಿದ್ದ ಕಾರಣ ಅದು ತಾಜಾ ಆಗಿರುತ್ತಿತ್ತು ಮತ್ತು ಆ ಹಿಟ್ಟಿನ ಬಳಕೆಯಿಂದ ಅದರಲ್ಲಿ ಇರುವ ಸೂಕ್ಷ್ಮ ಪೋಷಕಾಂಶಗಳು ಸೇವಿಸಿದಾಗ ಅದರ ಸತ್ವವನ್ನು ಪಡೆಯುತ್ತಿದ್ದರು. ಆದರೆ ಯಂತ್ರ ನಾಗರೀಕತೆಯ ಪ್ರಭಾವದಿಂದ ಬಂದ ವಿದ್ಯುತ್ ಹಿಟ್ಟಿನ ಗಿರಣಿಗಳಿಂದ ಅದರ ವೇಗ ಮತ್ತು ಅತಿಯಾದ ಶಾಖದಿಂದ ಸೂಕ್ಷ್ಮ ಪೋಷಕಾಂಶಗಳು ನಾಶವಾಗಿ ದೇಹಕ್ಕೆ ಈ ಅಂಶಗಳು ಸಿಗುತ್ತಿಲ್ಲವೆಂಬುದು ನಿಜ! ಈ ಕಾರಣದಿಂದ ಅನಾರೋಗ್ಯ ನಮ್ಮ ಹಿಂದಿನವರ ಶಕ್ತಿಯನ್ನು ಈಗಿನವರು ಗಳಿಸುವಲ್ಲಿ ವಿಫಲರಾಗಿರುವುದು ಯಂತ್ರನಾಗರೀಕತೆಯಿಂದ ಎಂಬುದು ನಾವು ಒಪ್ಪಬೇಕಾಗಿದೆ.

ಯಂತ್ರವೆಂಬುದು ಯಕ್ಷಪ್ರಶ್ನೆ

ನಾವು ಯಂತ್ರಗಳ ತಾತ್ವಿಕತೆ ಮತ್ತು ಅವುಗಳ ಉಪಯೋಗದ ಸಾಧ್ಯತೆಗಳನ್ನು ಸರಿಯಾದ ನೆಲೆಯಲ್ಲಿ ಗ್ರಹಿಸಿ ಅರ್ಥಮಾಡಿಕೊಳ್ಳಬೇಕು, ತಾತ್ವಿಕವಾಗಿ ನೋಡಿದಾಗ ಯಂತ್ರಗಳಿಗೆ - ಜಾತಿ, ಧರ್ಮ, ಮೇಲು, ಕೀಳು ಎಂಬ ಸಮಾಜದ ಅನಿಷ್ಟ ಪದ್ದತಿಗಳನ್ನು ದೂರವಾಗಿಸುವ ಹಿರಿಮೆ ಮತ್ತು ಅವುಗಳಿಂದ ಮುಕ್ತವಾಗಿಸಿ, ಅದರ ಅರಿವೆಯಿಲ್ಲದ ಹಾಗೆ ಮಾಡಿದ್ದರು ಕೂಡ , ಮನುಷ್ಯನ ಲಾಭಕೋರತನದಿಂದಾಗಿ ಅವುಗಳ ದುರುಪಯೋಗವಾಗಿದೆ, ಕಮ್ಯುನಿಸ್ಟಿಗೂ ಸಹ ಈ ವಿಷಯದಲ್ಲಿ ತಪ್ಪು ಗ್ರಹಿಕೆಗಳಿವೆ, ಬಂಡವಾಳಶಾಹಿಗಳಿಂದ ಯಂತ್ರಗಳನ್ನು ಬಿಡಿಸಿ ಅವುಗಳನ್ನು ಕಾರ್ಮಿಕರಿಗೆ ಒಪ್ಪಿಸಬೇಕೆಂದು ಅವರು ಬಯಸುತ್ತಾರೆ, ಆದರೆ ಯಂತ್ರಗಳು ದುಡಿಯುವ ಕೈಗಳಿಂದ ಕೆಲಸವನ್ನು ಕಿತ್ತುಕೊಂಡು ಅವರನ್ನು ಬರಿಕೈ ಮಾಡುತ್ತವೆ ಎಂಬುದನ್ನು ಯೋಚಿಸುವುದಿಲ್ಲ.

ಗಾಂಧೀಜಿಯವರ "ಗ್ರಾಮಸ್ವರಾಜ್ಯ" ಕಲ್ಪನೆಯ ಹಿನ್ನೆಲೆಯನ್ನು ನಾವು ಸ್ಪಷ್ಟವಾಗಿ ಗಮನಿಸಿದಾಗ ಮನುಷ್ಯನ ಅಗತ್ಯತೆಗೆ ಎಂತಹ ಯಂತ್ರಗಳು ಬೇಕು ಅದನ್ನು ಅಗತ್ಯಕ್ಕೆ ತಕ್ಕಂತೆ ಹೇಗೆ ಬಳಸಬೇಕು ಎಂಬುದು "ಯಕ್ಷ ಪ್ರಶ್ನೆ". ಈ ಹಿನ್ನೆಲೆಯಲ್ಲಿ ಭೂಮಂಡಲವನ್ನು ತನ್ನ ಅಧೀನದಲ್ಲಿ ಇಟ್ಟುಕೊಳ್ಳಬೇಕಾದ ಮನುಷ್ಯ "ಯಂತ್ರಾಧಿಪತ್ಯಕ್ಕೆ" ಒಳಗಾಗಿದ್ದಾನೆ, ನಮ್ಮ ಅಧಿಪತ್ಯದಲ್ಲಿ ಇರಬೇಕಾದ ಯಂತ್ರಗಳು, ನಮ್ಮ ಮೇಲೆ ಅಧಿಪತ್ಯ ಸಾಧಿಸಿರುವುದು ವಿಪರ್ಯಾಸವೆ ಸರಿ!....